ಕೇಂದ್ರ ವಿದ್ಯುತ್ ಯೋಜನೆಗಳ ವಿದ್ಯುತ್ ಪ್ರಮಾಣ

೧೬೫೦. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮೀಣ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿವಿಧ ಕೇಂದ್ರ ವಿದ್ಯುತ್ ಯೋಜನೆಗಳಿಂದ ರಾಜ್ಯವು ಪಡೆಯುತ್ತಿರುವ ವಿದ್ಯುತ್‌ನ ಪ್ರಮಾಣವೆಷ್ಟು ; (ಪ್ರತಿ ಯೋಜನೆಗಳಿಂದ ಪಡೆಯುತ್ತಿರುವ ವಿದ್ಯುತ್ ಪ್ರಮಾಣದ ಪ್ರತ್ಯೇಕ ವಿವರಗಳನ್ನೊದಗಿಸುವುದು).

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೯೮೭-೮೮ನೇ ಸಾಲಿನಲ್ಲಿ ಕೇಂದ್ರ ವಿದ್ಯುತ್ ಯೋಜನೆಗಳಿಂದ ದೊರೆತ ವಿದ್ಯುತ್ ಪ್ರಮಾಣ ಈ ರೀತಿ ಇದೆ.

	ಮಿ. ಯೂನಿಟ್ಟುಗಳಲ್ಲಿ
೧) ರಾಮಗುಂಡಂ ಸೂಪರ್ ಥರ್ಮಲ್ ಕೇಂದ್ರ	೧೦೭೫
೨) ಕಲ್ಪಾಕಂ ಅಣು ವಿದ್ಯುತ್ ಕೇಂದ್ರ	೧೨೭
೩) ನೈವೇಲಿ ಲಿಗ್ನೈಟ್ ಕಾರ್ಪೊರೇಷನ್	೩೫೨
ಒಟ್ಟು	೧೫೫೪ ಮಿ. ಯೂನಿಟ್‌ಗಳಲ್ಲಿ

ಶ್ರೀ ಎ. ಬಿ. ದೇಸಾಯಿ.—ಮಾನ್ಯ ಮಂತ್ರಿಯವರು ವಿದ್ಯುಚ್ಛಕ್ತಿ ಖೋತಾ ಇದೆ ಎಂದು ಹೇಳುತ್ತಾರೆ, ಹಾಗಿದ್ದರೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಪಡೆಯಲು ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಬೇರೆ ಕಡೆಯಿಂದ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಪಡೆದರೆ ಅವರಿಗೆ ಹೆಚ್ಚಿಗೆ ಹಣವನ್ನು ನಾವು ಕೊಡಬೇಕಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ನಾವು ಉತ್ಪಾದನೆಯನ್ನು ಹೆಚ್ಚಿಗೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕಾಗಿದೆ. ಅದನ್ನು ಬಿಟ್ಟು ಹೊರಗಡೆಯಿಂದ ಪಡೆಯುವುದಕ್ಕೆ ಪ್ರಯತ್ನಿಸುವುದು ಆಷ್ಟು ಆರೋಗ್ಯಕರವಾದಂಥ ವಿಷಯ ಇಲ್ಲ. ನಾವು ಈಗ ಮಹಾರಾಷ್ಟ್ರದಿಂದ ಪ್ರತಿನಿತ್ಯ ಐದು ಮಿಲಿಯನ್ ಯೂನಿಟ್‌ನಷ್ಟು ವಿದ್ಯುಚ್ಛಕ್ತಿಯನ್ನು ಪಡೆಯುತ್ತಾ ಇದ್ದೇವೆ. ಆದಕ್ಕೆ ಅವರಿಗೆ ಹೆಚ್ಚಿಗೆ ಹಣವನ್ನು ನಾವು ಕೊಡಬೇಕಾಗುತ್ತದೆ. ಆದಂದರಿಂದ ಇಲ್ಲಿಯೇ ಹೆಚ್ಚಿಗೆ ವಿದ್ಯುತ್ ಉತ್ಪಾದನೆಯನ್ನು ಮಾಡುವುದು ಸರಕಾರದವರ ಉದ್ದೇಶವಾಗಿದೆ.

ಶ್ರೀ ಎ. ಬಿ. ದೇಸಾಯಿ.—ಮಾನ್ಯ ಸಚಿವರು ಇಲ್ಲಿ ಉತ್ಪಾದನೆಯನ್ನು ಹೆಚ್ಚಿಗೆ ಮಾಡುವುದು ಯೋಗ್ಯ ಎಂದು ಹೇಳುತ್ತಾರೆ. ಹಾಗಾದರೆ ಯಾವ ಯೋಜನೆಗಳು ಯಾವ ಹಂತದಲ್ಲಿ ಇವೆ ಎಂದು ಹೇಳಬಹುದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ವರಾಹಿ ಯೋಜನೆಯು ಈ ವರ್ಷದ ಕೊನೆಯೊಳಗಾಗಿ ೧೧೫ ಮ್ಯಾಗಾವಾಟ್ಸ್ ಉತ್ಪಾದನೆಯನ್ನು ಪ್ರಾರಂಭ ಮಾಡುತ್ತದೆ. ಮುಂದಿನ ವರ್ಷದೊಳಗಾಗಿ ಅಂದರೆ ಮಾರ್ಚ್ ತಿಂಗಳ ಹೊತ್ತಿಗೆ ಇನ್ನೂ ೧೧೫ ಮ್ಯಾಗಾವಾಟ್ಸ್ ಉತ್ಪಾದನೆ ಆಗುತ್ತದೆ. ಯಲಹಂಕ ಡಿಜಲ್‌ಜನರೇಟರ್ ಸೆಟ್ ಈಗ ಫೈನಲೈಸ್ ಆಗಿದೆ, ಅದನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದೇ ರೀತಿಯಾಗಿ ಇನ್ನೂ ಮಿನಿ ಮಾತ್ರ ಮೈಕ್ರೋ ಹೈಡಲ್ ಪ್ರಾಜೆಕ್ಟ್ಸ್‌ಗಳ ಕೆಲವು ಸಿವಿಲ್ ಕೆಲಸ ಪ್ರಾರಂಭವಾಗಿದೆ. ಮುಂದಿನ ವರ್ಷದಲ್ಲಿ ಅವು ಸಹ ಉತ್ಪಾದನೆ ಮಾಡುವಂತೆ ಪ್ರಯತ್ನ ಮಾಡುತ್ತೇವೆ.